‘ಆ್ಯಕ್ಷನ್ ಎಂದ ತಕ್ಷಣ ನಾನು ಆ ಪಾತ್ರವಾಗಿ ಬದಲಾಗಬೇಕು. ಕಟ್ ಎಂದತಕ್ಷಣ ಅದರಿಂದ ಹೊರಗೆ ಬಂದು ಗೌರಿಯಾಗಬೇಕು. ಅದೇ ಸರಿಯಾದ ನಟನೆಯ ಕ್ರಮ. ಲೈಫ್ ಮತ್ತು ಆ್ಯಕ್ಟಿಂಗ್ ಒಂದೇ ಅಲ್ಲ. ಅದು ಬೇರೆ ಬೇರೆ. ನನ್ನ ನಿಜದ ವ್ಯಕ್ತಿತ್ವವನ್ನೇ ನಾನು ನಟಿಸುವ ಪಾತ್ರಕ್ಕೆ ಆರೋಪಿಸಿದರೆ ಅಥವಾ ನಾನು ನಟಿಸಿದ ಪಾತ್ರದ ವ್ಯಕ್ತಿತ್ವವನ್ನು ನನ್ನ ನಿಜದ ಬದುಕಿಗೆ ಆರೋಪಿಸಿಕೊಂಡರೆ ಅದರ ಪರಿಣಾಮ ಖಂಡಿತ ಒಳ್ಳೆಯದಾಗುವುದಿಲ್ಲ. ಅವೆರಡೂ ಬೇರೆ ಬೇರೆ ಎಂಬ ಅರಿವು ಕಲಾವಿದನಲ್ಲಿ ಇರಲೇಬೇಕು’ ಎನ್ನುವುದು ಗೌರಿ ನಟನೆಯ ವ್ಯಾಖ್ಯಾನ.

ನಟನೆಯಲ್ಲಿ ತೊಡಗಿಕೊಂಡಿದ್ದರೂ ಅವರ ಆಸಕ್ತಿಗೆ ಇನ್ನೂ ಹಲವು ಕವಲುಗಳಿವೆ. ನೃತ್ಯ ಎಂದರೆ ಇಷ್ಟ. ಓದಿನಲ್ಲಿ ಕಳೆದುಹೋಗುವ ಖುಷಿಯನ್ನು ಬಿಡುವು ಸಿಕ್ಕಾಗೆಲ್ಲ ಅನುಭವಿಸುತ್ತಾರೆ. ಪೆನ್ನು ಹಿಡಿದರೆ ಪಕ್ಕಾ ಜರ್ನಲಿಸ್ಟ್. ಕಾಫ್ಕಾ, ಮಲಯಾಳಂನ ಮುಕುಂದನ್ ಅವರಿಷ್ಟದ ಸಾಹಿತಿಗಳು.

‘ನನ್ನ ಅಜ್ಜ ದೊಡ್ಡ ಪತ್ರಕರ್ತರಾಗಿದ್ದರು. ಸ್ವಾತಂತ್ರ್ಯಹೋರಾಟಗಾರ ಕೂಡ ಆಗಿದ್ದರು. ಹಾಗಾಗಿ ಬರವಣಿಗೆ ನನ್ನ ರಕ್ತದಲ್ಲಿಯೇ ಬಂದ ಹಾಗಿದೆ. ಈಗಲೂ ನಾನು ಆನ್‌ಲೈನ್‌ಗೆ ಫ್ರೀಲ್ಯಾನ್ಸ್ ಜರ್ನಲಿಸ್ಟ್ ಆಗಿ ಕೆಲಸ ಮಾಡುತ್ತೇನೆ. ಬರವಣಿಗೆಯನ್ನು ಇಷ್ಟಪಡುತ್ತೇನೆ’ ಎನ್ನುವ ಗೌರಿ, ದಕ್ಷಿಣ ಭಾರತದ ಬೇರೆ ಬೇರೆ ಚಿತ್ರರಂಗದ ಬೆಳವಣಿಗೆಯನ್ನೂ ಬಹುಸೂಕ್ಷ್ಮವಾಗಿ ಗಮನಿಸುತ್ತಾರೆ. ‘ಎಲ್ಲ ಚಿತ್ರರಂಗಗಳಲ್ಲಿಯೂ ಬದಲಾವಣೆಯ ಗಾಳಿ ಬೀಸುತ್ತಿದೆ’ ಎನ್ನುವುದು ಅವರ ಅಭಿಪ್ರಾಯ.

‘ಕನ್ನಡದಲ್ಲಿ ಈಗ ಐದು ವರ್ಷಗಳ ಈಚೆಗೆ ಎಷ್ಟೊಂದು ಒಳ್ಳೆಯ ಸಿನಿಮಾಗಳು ಬಂದಿವೆ. ಸಾಕಷ್ಟು ಪ್ರಯೋಗಗಳು ನಡೆದಿವೆ. ಮಲಯಾಳಂ, ತಮಿಳು, ಕನ್ನಡ ಎಲ್ಲ ಚಿತ್ರರಂಗಗಳು ಪರಸ್ಪರ ಕೊಡುಕೊಳ್ಳುವಿಕೆಯಲ್ಲಿ ಬೆಳೆಯುತ್ತಿವೆ. ಅದು ಒಳ್ಳೆಯ ಲಕ್ಷಣ’ ಎನ್ನುತ್ತಾರೆ ಗೌರಿ.

ನಕ್ಸಲೈಟ್, ಡಾನ್ಸರ್ ಮತ್ತೆ ಟೀಚರ್ ಈ ಮೂರು ಅವರ ಕನಸಿನ ಪಾತ್ರಗಳು. ಇವುಗಳಲ್ಲಿ ಒಂದು ನನಸಾಗುವ ಹಂತದಲ್ಲಿದೆ. ‘ಲವ್ ಇನ್ ಟೀಚರ್’ ಎಂಬ ಸಿನಿಮಾ ಒಪ್ಪಿಕೊಂಡಿದ್ದಾರೆ. ಇನ್ನೆರಡು ಪಾತ್ರಗಳು ನನಸಾಗುವ ಗಳಿಗೆಗಾಗಿ ಕಾಯುತ್ತಲಿದ್ದಾರೆ.

‘ನಾನು ಸಿನಿಮಾಲೋಭಿ. ಎಷ್ಟು ಒಳ್ಳೆಯ ಪಾತ್ರಗಳು ಸಿಕ್ಕರೂ ಮತ್ತಷ್ಟು ಸಿಗಲಿ ಎಂದು ಬಯಸುತ್ತಲೇ ಇರುತ್ತೇನೆ’ ಎನ್ನುವ ಗೌರಿಗೆ, ಕನ್ನಡದಲ್ಲಿಯೇ ಇನ್ನಷ್ಟು ಸಿನಿಮಾಗಳನ್ನು ಮಾಡುವ ಕನಸಿದೆ. ■

# ಕಸ್ತೂರಿನ ನಿವಾಸ ವಾಸ ಒಲ್ಲೆ ಅಂದ್ರು ರಚಿತಾ

ಕನ್ನಡ, ತಮಿಳು, ತೆಲುಗು ಮಲಯಾಳಂ ಚಿತ್ರರಂಗದಲ್ಲಿ ಛಾಯಾಗ್ರಾಹಕ, ನಿರ್ದೇಶಕರಾಗಿ ಹೆಸರುಗಳಿಸಿದವರು ದಿನೇಶ್ ಬಾಬು. ‘ಅಮೃತವರ್ಷಿಣಿ’ಯಂಥ ಹಿಟ್ ಸಿನಿಮಾ ಕೊಟ್ಟ ಈ ನಿರ್ದೇಶಕನ ಐವತ್ತನೇ ಚಿತ್ರ ಇತ್ತೀಚೆಗಷ್ಟೇ ಸೆಟ್ಟೇರಿದೆ. ಆದರೆ ಐವತ್ತನೇ ಹೆಜ್ಜೆಯನ್ನು ಗಟ್ಟಿಯಾಗಿ ಊರಲು ಅವರಿಗೆ ಕ್ಷಣಕ್ಷಣಕ್ಕೂ ಅಡೆತಡೆಗಳು ಎದುರಾಗುತ್ತಿವೆ.

ಡಿಂಪಲ್ ಕ್ವೀನ್ ರಚಿತಾ ರಾಮ್ ಅವರನ್ನು ನಾಯಕಿಯನ್ನಾಗಿಸಿಕೊಂಡು ತೆಗೆಯಲು ಹೊರಟಿದ್ದ ಸಿನಿಮಾಕ್ಕೆ ಅವರು ‘ಕಸ್ತೂರಿ ನಿವಾಸ’ ಎಂದು ಹೆಸರಿಟ್ಟಿದ್ದೇ ಮುಳ್ಳಾಯಿತು. ರಾಜ್‌ಕುಮಾರ್ ಅಭಿನಯದ, ದೊರೈ ಭಗವಾನ್ ನಿರ್ದೇಶನದ ‘ಕಸ್ತೂರಿ ನಿವಾಸ’ವನ್ನು ಬೇರೆ ಸಿನಿಮಾದ ಶೀರ್ಷಿಕೆಯಾಗಿ ನೋಡಲಾಗದ ಅವರ ವಿರುದ್ಧ ಬೊಬ್ಬೆ ಎದ್ದಿತು. ಈ ಶೀರ್ಷಿಕೆಗೆ ಅನುಮೋದನೆ ನೀಡಿದ ವಾಣಿಜ್ಯ ಮಂಡಳಿ ವಿರುದ್ಧವೂ ಕಿಡಿ ಹಾರಿತು. ಕೊನೆಗೆ ಒಂದು ಹೆಜ್ಜೆ ಹಿಂದಕ್ಕಿಟ್ಟ ದಿನೇಶ್, ತಮ್ಮ ಚಿತ್ರದ ಶೀರ್ಷಿಕೆ ಬದಲಿಸಿ ‘ಕಸ್ತೂರಿ ಮಹಲ್’ ಎಂದಿಟ್ಟರು. ಅಲ್ಲಿಗೆ ಎಲ್ಲವೂ ಶಾಂತವಾಯಿತು.



ನಿರ್ದೇಶಕ ದಿನೇಶ್ ಬಾಬು

ಇನ್ನೇನು ಚಿತ್ರೀಕರಣ ಆರಂಭವಾಗಬೇಕು ಎನ್ನುವಾಗ ಇನ್ನೊಂದು ಶಾಕ್ ಎದುರಾಗಿದೆ. ಈ ಸಲ ಶಾಕ್ ಕೊಟ್ಟವರು ಜನರಲ್ಲ, ಚಿತ್ರದ ನಾಯಕಿಯೇ! ಹೌದು, ರಚಿತಾ ರಾಮ್ ‘ಕಸ್ತೂರಿ ಮಹಲ್’ನಲ್ಲಿ ಇರಲು ಒಲ್ಲೆ ಎಂದು ಹೊರನಡೆದಿದ್ದಾರೆ. ಸಾಕಷ್ಟು ಸಿನಿಮಾಗಳ ನಡುವೆ ಡೇಟ್ ಹೊಂದಾಣಿಕೆ ಆಗದಿರುವುದೇ ಇದಕ್ಕೆ ಕಾರಣವಂತೆ.

ಸಾಮಾನ್ಯವಾಗಿ ಡೇಟ್ಸ್ ಲಭ್ಯತೆಯನ್ನು ಗಮನದಲ್ಲಿಟ್ಟುಕೊಂಡೇ ಸಿನಿಮಾ ಒಪ್ಪಿಕೊಳ್ಳುವುದು ವಾಡಿಕೆ. ಅಲ್ಲದೇ ಐದಾರು ಸಿನಿಮಾಗಳನ್ನು ಒಪ್ಪಿಕೊಂಡು ಒಂದಾದ ಮೇಲೆ ಇನ್ನೊಂದನ್ನು ಮುಗಿಸುವ ಹೊಂದಾಣಿಕೆಯೂ ಗಾಂಧಿನಗರಕ್ಕೆ ಹೊಸತಲ್ಲ. ಆದರೆ ‘ಕಸ್ತೂರಿ ಮಹಲ್’ನಲ್ಲಿ ಈ ಹೊಂದಾಣಿಕೆ ರಚಿತಾ ರಾಮ್‌ಗೆ ಒದಗಿಬಂದಂತೆ ಕಾಣುವುದಿಲ್ಲ. ಬರಿ ಡೇಟ್ಸ್ ಹೊಂದಾಣಿಕೆಯಷ್ಟೇ ವಿಷಯವಲ್ಲ ಎನ್ನುತ್ತವೆ ಗಾಂಧಿನಗರದ ಮೂಲಗಳು. ಹಾಗಾದರೆ ಚಿತ್ರತಂಡಕ್ಕೂ ರಚ್ಚಿಗೂ ಬಂದಿರುವ ಭಿನ್ನಾಭಿಪ್ರಾಯವೇನು ಎಂಬ ಪ್ರಶ್ನೆಗೆ ಉತ್ತರವನ್ನು ಅವರೇ ಕೊಡಬೇಕು. ಆದರೆ ಈ ಕುರಿತು ಚಿತ್ರತಂಡವಾಗಲಿ, ರಚಿತಾರಾಮ್ ಆಗಲಿ ಬಾಯಿಬಿಟ್ಟಿಲ್ಲ. ಬದಲಿಗೆ ದಿನೇಶ್ ಬಾಬು ಮತ್ತೊಬ್ಬ ನಾಯಕಿಯ ಹುಡುಕಾಟದಲ್ಲಿ ತೊಡಗಿದ್ದಾರಂತೆ. ■

